


ಭಾರತ ಹಾಕಿ ತಂಡದ  ಮನಪ್ರೀತ್ ಸಿಂಗ್ ಅಭ್ಯಾಸದ ಕ್ಷಣ

ಇನ್ನೊಮ್ಮೆ ಅದನ್ನು ಎತ್ತಿಹಿಡಿಯಲು ಆಗದೇಹೋದದ್ದೇ ಇಡೀ ಕಥೆಯನ್ನು ಹೇಳೀತು.

### ಇಳಿಜಾರು ಹಾದಿಯಲಿ...

‘ಕಳೆದ ಮೂವತ್ತು ವರ್ಷಗಳಲ್ಲಿ ಹಾಕಿಯಲ್ಲಿ ಭಾರತ ಏದುಸಿರಿಟ್ಟಿತು. ಇನ್ನಿಲ್ಲದಂತೆ ಕುಸಿಯಿತು’ ಎನ್ನುವುದು ಪರಿಣತರ ವಿಶ್ಲೇಷಣೆ. ಹತ್ತು ವರ್ಷಗಳ ಹಿಂದೆ ಚಾಂಪಿಯನ್ಸ್ ಟ್ರೋಫಿಗೆ, ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಲೂ ಆಗದಷ್ಟು ಪುರುಷರ ಹಾಕಿ ತಂಡ ಕುಸಿದಿದ್ದು ನಮಗೆ ಗೊತ್ತೇ ಇದೆ. ‘ಹಾಕಿ ಫೆಡರೇಷನ್ ಆಫ್ ಇಂಡಿಯಾ’ದ ಇಟ್ಟಿಗೆಗಳು ಸಡಿಲಗೊಂಡ ಮೇಲೆ ದೇಶದ ಹಾಕಿ ಚೇತರಿಸಿಕೊಳ್ಳಲಾರದಷ್ಟು ಗುಣಮಟ್ಟದಲ್ಲಿ ಕುಸಿಯಿತು.

ಭಾರತದ್ದೇ ಇನ್ನೊಂದು ಹೋಳು ಪಾಕಿಸ್ತಾನದಲ್ಲೂ ಪರಿಸ್ಥಿತಿ

## ಭುವನೇಶ್ವರಕ್ಕೆ ಬಣ್ಣ ಬಣ್ಣ

2014ರಲ್ಲಿ ಇಂಟರ್‌ನ್ಯಾಷನಲ್ ಹಾಕಿ ಫೆಡರೇಷನ್ (ಎಫ್‌ಐಎಚ್) ಚಾಂಪಿಯನ್ಸ್ ಟ್ರೋಫಿ ನಡೆದದ್ದು ಭುವನೇಶ್ವರದಲ್ಲಿ. 2017ರಲ್ಲಿ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಆತಿಥ್ಯವನ್ನೂ ಇದೇ ನಗರಿ ವಹಿಸಿತ್ತು. ಹಾಕಿ ವಿಶ್ವ ಲೀಗ್ ಫೈನಲ್ಸ್ ಹೋದ ವರ್ಷ ನಡೆದ ಸ್ಥಳವೂ ಇದೇ. ಈ ವರ್ಷ ಹೀರೊ ಸೂಪರ್ ಕಪ್‌ಗೆ ಭುವನೇಶ್ವರ ಸಾಕ್ಷಿಯಾದದ್ದು ತಾಜಾ ನೆನಪು.

ಇಲ್ಲಿನ ಸರ್ಕಾರ ಕ್ರೀಡಾ ರಾಜಧಾನಿಯನ್ನಾಗಿ ಭುವನೇಶ್ವರವನ್ನು ರೂಪಿಸಬೇಕೆಂದು ಟೊಂಕಕಟ್ಟಿದೆ. ಇಲ್ಲಿನ ಕಳಿಂಗ ಹಾಕಿ ಕ್ರೀಡಾಂಗಣದಲ್ಲಿ ವಿಶ್ವಕಪ್ ಹಾಕಿ ನಡೆಯಲಿದ್ದು, ಅದಕ್ಕೆ ಮುನ್ನವೇ ಪ್ರಚಾರದ ಎಲ್ಲ ದಾರಿಗಳಲ್ಲೂ ನಡೆಯಲು ಅಧಿಕಾರಿಗಳು ಯತ್ನಿಸಿರುವುದು ಗಮನಾರ್ಹ. ಕ್ರೀಡಾ ಹಾಗೂ ಪ್ರವಾಸೋದ್ಯಮ ಇಲಾಖೆಗಳು ಈ ವಿಷಯದಲ್ಲಿ ಒಟ್ಟೊಟ್ಟಿಗೆ ಹೆಜ್ಜೆ ಹಾಕುತ್ತಿವೆ. ಕ್ರೀಡಾ ಸಚಿವ ಚಂದ್ರ ಸಾರಥಿ ಬಹೆರಾ ಅವರಲ್ಲಿ ಅಮಿತೋತ್ಸಾಹ. ನವದೆಹಲಿ, ಮುಂಬೈ, ಚೆನ್ನೈ, ಕೋಲ್ಕತ್ತ, ಬೆಂಗಳೂರು, ಹೈದರಾಬಾದ್ ಎಲ್ಲ ಕಡೆ ರೋಡ್ ಷೋಗಳನ್ನು ಆಯೋಜಿಸಿರುವ ಅವರು ಲಂಡನ್‌ನಿಂದ ಬಸ್ ಮೂಲಕ ಪ್ರಚಾರವನ್ನೂ ಕೈಗೊಂಡಿರುವುದಾಗಿ ತಿಳಿಸಿದ್ದರು.

‘ಒಡಿಶಾ ಬೈ ಮಾರ್ನಿಂಗ್, ಹಾಕಿ ಬೈ ಈವ್‌ನಿಂಗ್’ ಎಂಬ ಸಂದೇಶದ ಜಾಹೀರಾತು ಹೊತ್ತ ಬಸ್‌ಗಳೂ ಸಂಚರಿಸುತ್ತಿವೆ. ಆಸ್ಟ್ರೇಲಿಯಾದ ಸಿಡ್ನಿ, ಜರ್ಮನಿಯ ಮ್ಯೂನಿಚ್ ಹಾಗೂ ಮಲೇಷ್ಯಾದಲ್ಲೂ ಇಂಥ ಜಾಹೀರಾತುಗಳಿರುವ ಬಸ್‌ಗಳು ಓಡಾಡಲಿವೆ. ಕ್ರೀಡಾ ಪ್ರವಾಸವನ್ನು ದೊಡ್ಡ ಮಟ್ಟದಲ್ಲಿ ಉತ್ತೇಜಿಸುತ್ತಿರುವ ಭಾರತದ ಏಕೈಕ ರಾಜ್ಯ ತಮ್ಮದು ಎಂದೂ ಚಂದ್ರ ಸಾರಥಿ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಹಾಕಿ ವಿಶ್ವಕಪ್ ಸಂದರ್ಭದಲ್ಲಿ ಸುಮಾರು 40 ಸಾವಿರ ವಿದೇಶಿ ಪ್ರವಾಸಿಗರ ನಿರೀಕ್ಷೆಯಲ್ಲಿ ಅವರಿದ್ದಾರೆ. ಒಡಿಶಾ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು (ಒಟಿಡಿಸಿ) ವಿದೇಶಿ ಪ್ರವಾಸಿಗರಿಗೆ ತಂಗುವ ವ್ಯವಸ್ಥೆ ಸಲೀಸಾಗಿ ಆಗಲೆಂದೇ ‘ಓಯೊ’ ರೂಮ್‌ಗಳ ಜತೆಗೆ ಒಡಂಬಡಿಕೆ ಮಾಡಿಕೊಂಡಿದೆ. ಕಳಿಂಗ ಕ್ರೀಡಾಂಗಣಕ್ಕೆ ಹೊಸ ಮೆರುಗು ನೀಡಲಾಗಿದ್ದು, 15 ಸಾವಿರ ಮಂದಿ ಕುಳಿತುಕೊಳ್ಳುವ ವ್ಯವಸ್ಥೆ ಇದೆ. ಭುವನೇಶ್ವರ ಮುನ್ಸಿಪಲ್ ಕಾರ್ಪೊರೇಷನ್ (ಬಿಎಂಸಿ) ಹಾಗೂ ಭುವನೇಶ್ವರ ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಗರದ ಸೌಂದರ್ಯ ವರ್ಧಿಸುವ ಕೆಲಸಗಳನ್ನು ಮಾಡಿಸುತ್ತಿವೆ. ಹಾಕಿ ಹಾಗೂ ಆಟಗಾರರ ಚಿತ್ರಗಳನ್ನು ಗೋಡೆಗಳ ಮೇಲೆ ಬಿಡಿಸುತ್ತಿರುವುದು ಈ ಪೈಕಿ ಎದ್ದುಕಾಣುತ್ತಿರುವ ಕೆಲಸ.

ಮುನ್ನೂರು ಹೊಸ ಬಸ್‌ಗಳು ಹಾಕಿ ವಿಶ್ವಕಪ್ ಸಂದರ್ಭಕ್ಕೆಂದೇ ರಸ್ತೆಗೆ ಇಳಿಯಲಿವೆ. ಜನಸಂಚಾರ ಹೆಚ್ಚಾಗಿರುವ ಪ್ರಮುಖ ಸ್ಥಳಗಳಲ್ಲಿ ದೊಡ್ಡ ಎಲ್‌ಇಡಿ ಪರದೆಗಳನ್ನು ಹಾಕಿ, ಅವುಗಳಲ್ಲೂ ಪಂದ್ಯಗಳನ್ನು ಪ್ರದರ್ಶಿಸುವ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

